## ಕನ್ನಡ ಪದವನ್ನೇ ಬಳಸಿ

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' 4ನೇ ಸರಣಿ ಆರಂಭವಾಗಿದೆ. ನಾಡಿನ ಪ್ರತಿಭಾವಂತ ಮರಿಸಿಂಹಗಳನ್ನು ಗುರುತಿಸುವುದಕ್ಕೆ ಇದೊಂದು ಉತ್ತಮ ವೇದಿಕೆ. ಸೀಜನ್–4ರ ತೀರ್ಪುಗಾರರಾಗಿರುವ ಜೂಲಿ ಲಕ್ಷ್ಮಿ, ರವಿಚಂದ್ರನ್ ಮತ್ತು ರಚಿತಾ ರಾಮ್ ಅವರಿಗೆ ಶುಭಾಶಯಗಳು. ತೀರ್ಪುಗಾರರು ಹೆಚ್ಚಾಗಿ ಇಂಗ್ಲಿಷ್ ಪದಗಳನ್ನು ಬಳಸುತ್ತಿದ್ದಾರೆ. ದಯವಿಟ್ಟು ಕನ್ನಡಕ್ಕೆ ಮೊದಲ ಆದ್ಯತೆ ನೀಡಿ. ಸಾಧ್ಯವಾದಷ್ಟು ಕನ್ನಡ ಪದಗಳನ್ನೇ ಬಳಕೆ ಮಾಡಿ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

## ರಾಮಾಚಾರಿ ಹೊಸತನ ನೀಡಲಿ

ಕಲರ್ಸ್ ಕನ್ನಡದ 'ರಾಮಾಚಾರಿ'ಯ ಚಾರುಲತಾಳ ನಟನೆ ಸ್ವಲ್ಪ ಅತಿಯಾಗಿ ಅನ್ನಿಸಿದರೂ ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ಬುದ್ಧಿವಂತಿಕೆ ಇದ್ದರೆ ಸಮಸ್ಯೆಗಳು ಹೇಗೆ ಸುಲಭವಾಗಿ ಪರಿಹಾರ ಆಗುತ್ತವೆ ಎಂಬುದನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಇದನ್ನು ಇತರ ಧಾರಾವಾಹಿಯಂತೆ ಅನಗತ್ಯ ಎಳೆಯಬಾರದು. ಕತೆಯ ವೇಗವನ್ನು ಆಮೆಗತಿಯಲ್ಲಿ ಸಾಗಿಸದೆ ತೀವ್ರತೆ ನೀಡಲಿ.

—ಸುಂದರ್ ಜಿ.ಕೆ.

ವಾರದ ಪತ್ರ

## ನಾವು ಯಾವ ಯುಗದಲ್ಲಿದ್ದೇವೆ?

ಮನೆಯಲ್ಲಿ ನಮ್ಮತ್ತೆ ಎಲ್ಲ ಧಾರಾವಾಹಿಗಳನ್ನೂ ನೋಡುತ್ತಾರೆ. ಹಾಗಾಗಿ ನಮಗೆ ಬಲವಂತ ಮಾಘಸ್ನಾನ.

ಬಹುತೇಕ ಧಾರಾವಾಹಿಗಳಲ್ಲಿ ಬರೀ ದ್ವೇಷ, ಸೇಡು ತುಂಬಿದೆ. 'ಮಂಗಳಗೌರಿ ಮದುವೆ'ಗೆ ಹೊಸ ಖಳ ಬಂದಿದ್ದಾನೆ. ಅನೇಕ ವೀಕ್ಷಕರು ಈ ಧಾರಾವಾಹಿ ಮುಗಿಸಿ ಎಂದು 'ಜಾಣರ ಪೆಟ್ಟಿಗೆ'ಯಲ್ಲಿ ಪ್ರಕಟಿಸಿದ್ದಾರೆ. ಆದರೆ ಕಥೆ ದಿನದಿನಕ್ಕೆ ಬೇರೆ ತಿರುವು ಪಡೆದು ಗಿನ್ನಿಸ್ ದಾಖಲೆಗೆ ಕಾಯುತ್ತಿದೆ ಎಂದು ಎನಿಸುತ್ತದೆ.

'ಗೀತಾ'ದಲ್ಲಿ ತಾಯಿಯ ಮಾತು ಕೇಳಿ ಹೆತ್ತ ಮಗಳೇ ತಂದೆಯನ್ನು ಕೊಲ್ಲಲು ಯತ್ನಿಸುವುದು. ಸಾಯದಿದ್ದಾಗ ಆಸ್ಪತ್ರೆಯಲ್ಲಿ ಅವನು ಕೋಮಾಗೆ ಹೋಗುವಂತೆ ಮಾಡುವುದು ಅತಿರೇಕದ ಪರಮಾವಧಿ.

'ಕನ್ನಡತಿ' ಸ್ವಲ್ಪ ಚೆನ್ನಾಗಿ ಬರುತ್ತಿದೆ ಎಂದುಕೊಂಡರೆ ಅದರಲ್ಲೂ ಬರೀ ದ್ವೇಷ, ಕೊಲೆಗೆ ಸುಪಾರಿ ಕೊಡುವುದು. ನಾವು ಸಮಾಜಕ್ಕೆ ಒಳ್ಳೆಯ ಸಂದೇಶ ಕೊಡದಿದ್ದರೂ ತೊಂದರೆ ಇಲ್ಲ. ಕೆಟ್ಟ ಸಂದೇಶ ಕೊಡಬಾರದು. ಹಿಂಸೆ ಕ್ರೌರ್ಯ ದ್ವೇಷ ಇರುವ ಧಾರಾವಾಹಿಗಳನ್ನು ನಿಲ್ಲಿಸುವುದು ಒಳ್ಳೆಯದೆಂದು ನನ್ನ ಭಾವನೆ.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ಪುಟ್ಟಕ್ಕನ ನ್ಯಾಯ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು'ನಲ್ಲಿ ಬಡ್ಡಿ ಬಂಗಾರಮ್ಮನಿಗೆ ತನ್ನ ಪಂಚಾಯಿತಿ ತೀರ್ಪಿನ ಬಗ್ಗೆ ಅಪಾರ ಹೆಮ್ಮೆ. ಆಕೆಗೆ ತಾನು ಎಂದೂ ತಪ್ಪು ತೀರ್ಪು ಕೊಟ್ಟೇಯಿಲ್ಲ ಎಂಬ ಗರ್ವ. ಕುಟುಂಬ ಕಲಹಗಳಲ್ಲಿ ಗಂಡ ಕ್ಷಮೆ ಕೇಳದಿದ್ದರೆ, ಗಂಡ–ಹೆಂಡತಿ ಬೇರೆ ಬೇರೆ ಇರಬೇಕೆಂಬ ತೀರ್ಪನ್ನು ನೀಡಿದ್ದಾಳೆ.

ತನ್ನ ಗಂಡನ ಜೀವ ಕಾಪಾಡಿದ್ದ ಪುಟ್ಟಕ್ಕನ ಮೇಲೆ ವಿಶೇಷ ಪ್ರೀತಿಯನ್ನು ಬಡ್ಡಿ ಬಂಗಾರಮ್ಮ ಹೊಂದಿದ್ದಾಳೆ. ದೇವಸ್ಥಾನದಲ್ಲಿ ಪುಟ್ಟಕ್ಕನಿಗೆ ಒಮ್ಮೆ ತನ್ನ ಸರಿಸಮಾನವಾಗಿ ಕೂತು ಮಾತನಾಡುವ ಅವಕಾಶವನ್ನು ಕಲ್ಪಿಸುತ್ತಾಳೆ. ಆಗ ನಯವಾಗಿ ಆಕೆಯನ್ನು ಪುಟ್ಟಕ್ಕ ತಿದ್ದುತ್ತಾಳೆ. ಆಕೆಯ ಏಕಪಕ್ಷೀಯ ತೀರ್ಪನ್ನೂ ಅರಿವಿಗೆ ತರುತ್ತಾಳೆ. ಬಂಗಾರಮ್ಮನ ಕಣ್ಣು ತೆರೆಸುವ ಈ ದೃಶ್ಯ ಸೊಗಸಾಗಿ ಮೂಡಿಬಂದಿದೆ. ನ್ಯಾಯದ ತಕ್ಕಡಿ ಇಕ್ಕೆಲಗಳನ್ನೂ ಸಮನಾಗಿ ತೂಗಬೇಕಿತ್ತು ಎಂಬ ಪುಟ್ಟಕ್ಕನ ನ್ಯಾಯ ಮೆಚ್ಚುಗೆಯಾಗುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಬಲವಂತದ ಮದುವೆ

ಕಲರ್ಸ್‌ನ 'ಲಕ್ಷಣ'ದಲ್ಲಿ ಶಕುಂತಲಾಳ ಮಗ ಆಕ್ಸಿಡೆಂಟ್ ಮಾಡಿದ್ದಾನೆ. ಹಲವರನ್ನು ಸಾಯಿಸಿ ಈಗ ತಲೆಮರೆಸಿಕೊಂಡಿದ್ದಾನೆ. ಅವನನ್ನು ಬಿಡಿಸಲು ಚಂದ್ರಶೇಖರ್‌ಗೆ ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ. ಅದನ್ನು ಭೂಪತಿ ಕೂಡ ಬೆಂಬಲಿಸುತ್ತಿದ್ದಾನೆ. ಚಂದ್ರಶೇಖರ್ ಮಗಳು ನಕ್ಷತ್ರಳನ್ನು ಭೂಪತಿ ಪ್ರೀತಿಸಿದ್ದಾನೆ. ಅವರ ಸ್ನೇಹ ಮದುವೆಯ ಹಂತಕ್ಕೆ ಬಂದಿದೆ. ಈಗ ಚಂದ್ರಶೇಖರ್, ಶಕುಂತಲಾ ಹತ್ತಿರ ಬಂದು ನಿನ್ನ ಮಗ ಸೇಫ್ ಆಗಿ ಬರಬೇಕಂದ್ರೆ ಭೂಪತಿ ನನ್ನ ಮಗಳಾದ ನಕ್ಷತ್ರಳನ್ನು ಮದುವೆ ಆಗಬೇಕು ಎಂದು ಒತ್ತಾಯಿಸುತ್ತಾನೆ.

ಮದುವೆ ಎನ್ನುವುದು ಆಟದ ವಿಷಯವಲ್ಲ. ಅವರಿಗಿಷ್ಟ ಬಂದಹಾಗೆ ನಿಮಿಷಕ್ಕೆ ಒಬ್ಬರನ್ನು ತೋರಿಸಿ 'ಇವಳಿಗೆ ತಾಳಿಕಟ್ಟು' ಅಂದ್ರೆ ಹುಡುಗ ಹುಡುಗಿಯ ಮನಸ್ಸಿಗೆ ಆಗುವ ನೋವನ್ನು ಅರ್ಥ ಮಾಡಿಕೊಳ್ಳುವುದು ಯಾರು? ಬಲವಂತದಿಂದ ಮದುವೆ ಮಾಡಿಸಲು ಯತ್ನಿಸುವುದು ಎಷ್ಟು ಸರಿ.

—ಬಿ.ಆರ್. ಉಷಾ, ಬೆಂಗಳೂರು

## ಇದೂ ಅಪರಾಧ

ಕಲರ್ಸ್ ಕನ್ನಡದ 'ಲಕ್ಷಣ' ಎತ್ತೆತ್ತಲೋ ಸಾಗುತ್ತಿದೆ. ತನ್ನ ತಂದೆಯನ್ನೇ ಕೊಲ್ಲಿಸಲು ಹಲವು ಬಾರಿ ಯತ್ನಿಸಿದ್ದು ಗೊತ್ತಿದ್ದೂ ಶ್ವೇತಾಳ ಬಗ್ಗೆ ಮೃದು ಧೋರಣೆಯನ್ನು ನಕ್ಷತ್ರಾ ಹೊಂದಿದ್ದಾಳೆ. ಕಂಟಕ ಗುಣದ ಆಕೆ ನಕ್ಷತ್ರಾಳ ಗೆಳೆಯ ಭೂಪತಿಯೊಂದಿಗೆ ಮದುವೆ ಮಾಡಿಸಲು ಯತ್ನಿಸುವುದೂ ಅಚ್ಚರಿಯನ್ನು ಉಂಟುಮಾಡುತ್ತದೆ. ಅಪರಾಧಿ ಮನೋಭಾವದ ಶ್ವೇತಾಳ ಗುಣ ಗೊತ್ತಿದ್ದೂ ಸಹಾನುಭೂತಿ ತೋರಿಸುವುದು ಅಪರಾಧವಲ್ಲವೇ? ನಕ್ಷತ್ರ ಬಹುತೇಕ ಅಳುತ್ತಲೇ ಮಾತಾಡುವುದು ಏಕೋ ಏನೋ?

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ನಿಯಮ ಮೀರಬಾರದು

ಕಲರ್ಸ್ ಕನ್ನಡದ 'ಚಿಕ್ಕೆಜಮಾನಿ'ಯಲ್ಲಿ ಬಾಲ್ಯ ವಿವಾಹದ ಕುರಿತ ಅರಿವು ಹಾಗೂ ಮಹಿಳೆಯರ ಹಕ್ಕಿನ ಬಗ್ಗೆ ತಿಳಿವಳಿಕೆ ನೀಡುತ್ತಿರುವುದು ಗಮನ ಸೆಳೆಯುವಂತೆ ಇದೆ. ಬಾಲ ನಟಿಯಾಗಿ ಭೂಮಿಕಾಳ ಪಾತ್ರ ಮೆಚ್ಚುಗೆ ಆಗುತ್ತಿದೆ.

ಚಿಕ್ಕೆಜಮಾನಿ ಬ್ಯಾರಿಸ್ಟರ್ ಪದವಿ ಪಡೆದ ನಂತರ ಹೊಸ ಅಧ್ಯಾಯ ಪ್ರಾರಂಭವಾಗಿದೆ. ಅದರಲ್ಲಿ ಭೂಮಿಕಾ, ವೈಜಯಂತಿ ಎಂದು ಸುಳ್ಳು ಹೇಳಿ ಓದುತ್ತಿದ್ದಾಳೆ. ಒಮ್ಮೆ ಇನ್‌ಲ್ಯಾಂಡ್ ಲೆಟರಿನ ಒಳಗಿರುವ ಹಾಳೆಯನ್ನು ತೆಗೆದು ಓದುತ್ತಾಳೆ. ಇನ್‌ಲ್ಯಾಂಡ್ ಲೆಟರ್ ಒಳಗೆ ಬೇರೆ ಪತ್ರಗಳನ್ನು ಇಡಬಾರದು ಎಂಬ ನಿಯಮವಿದೆ. ಇಲ್ಲಿ ನಿರ್ದೇಶಕರು ತಪ್ಪಿದ್ದಾರೆ. ಇನ್‌ಲ್ಯಾಂಡ್ ಲೆಟರ್ ಬದಲಿಗೆ ಪೋಸ್ಟ್ ಕವರ್‌ನಲ್ಲಿ ಕೈ ಬರಹದ ಹಾಳೆಯನ್ನು ಇಟ್ಟಿದ್ದರೆ ಸರಿ ಹೋಗುತ್ತಿತ್ತು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಸಂಬಂಧದಲ್ಲಿ ಹುಳಿ ಹಿಂಡಬೇಡಿ

ಕಲರ್ಸ್ ಕನ್ನಡದ 'ಕನ್ನಡತಿ' ನಿರ್ದೇಶಕರೇ ದಯವಿಟ್ಟು ವರೂನಲ್ಲಿ ದ್ವೇಷ ಹುಟ್ಟು ಹಾಕಬೇಡಿ. ವರೂ ಮತ್ತು ಭುವಿಯ ಸ್ನೇಹ, ಮುಂಚೆ ಪವಿತ್ರ ಎಂದು ಬಿಂಬಿಸಿದಿರಿ ಈಗ ಅವರ ಸ್ನೇಹದ ಬಾಂಧವ್ಯವನ್ನು ಸಾನಿಯಾ ಕುತಂತ್ರಕ್ಕೆ ಬಳಸಬೇಡಿ. **'A friend in need is a fried indeed'** ಅಂತ ಇಂಗ್ಲಿಷ್ ಗಾದೆ ಇದೆ. ಅದನ್ನು ದುರ್ಬಳಕೆ ಮಾಡಬೇಡಿ. ಏನೇ ಆದರೂ ನಿಮ್ಮ ಮುಂದಿನ ಸಂಚಿಕೆಯಲ್ಲಿ ಅವರಿಬ್ಬರ ಸ್ನೇಹದ ನಡುವೆ ಮತ್ತಷ್ಟು ಹುಳಿ ಹಿಂಡಬೇಡಿ. ಈಗಾಗಲೇ ಧಾರಾವಾಹಿಯನ್ನೂ ರಬ್ಬರ್ ತರ ಎಳೆಯಲಾಗುತ್ತಿದೆ. ಕೂಡಲೇ ಒಂದು ತಾರ್ಕಿಕ ಅಂತ್ಯ ತೋರಿಸಿ.

—ನಾಡಿಗ್ ರಾಮಚಂದ್ರ, ಬೆಂಗಳೂರು